ಸಿಸಿ. ನಂಬರಃ 292/2020

ಪಿ. ಡಬ್ಲ್ಯೂಃ 7

ದಿಃ 26-12-2024ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್.ಆರ್.ಎನ್ ಇವರಿಂದಃ

ಚಾಸಾ-1 ನನ್ನ ಮೇಲಾಧಿಕಾರಿ ಎಂದರೆ ಸರಿ. ನಾವು ಕರ್ತವ್ಯದಲ್ಲಿ ಇರುವ ಸಮಯದಲ್ಲಿ ಮೇಲಾಧಿಕಾರಿಗಳ ಮಾತನ್ನು ಕೇಳಬೇಕಾಗುತ್ತದೆ ಎಂದರೆ ಸರಿ. ನೀವು ಚಾಸಾ-1 ರವರ ಹೇಳಿಕೆಯ ಮೇರೆಗೆ ನ್ಯಾಯಾಲಯದ ಮುಂದೆ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿ. ಚಾಸಾ-6 ರವರೂ ಸಹ ನಿಮ್ಮ ಮೇಲಾಧಿಕಾರಿ ಎಂದರೆ ಸರಿ. ನೀವು ನಿಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ದಾಖಲೆಯ ಮೇಲೆ ಸಹಿ ಹಾಕಿರುತ್ತೀರಿ ಎಂದರೆ ಸರಿ. ಪಂಚನಾಮೆ ಮೇಲೆ ಚಾಸಾ-1 ಮತ್ತು 6 ರವರ ಹೇಳಿಕೆಯ ಮೇರೆಗೆ ಸಹಿಯನ್ನು ಹಾಕಿರುತ್ತೀರಿ ಎಂದರೆ ಸರಿ. ಸದರಿ ದಾಖಲೆಯ ಮೇಲೆ ಇದೇ ರೀತಿ ಬರೆಯಿರಿ ಎಂದು ನೀವು ಹೇಳಿರುವುದಿಲ್ಲ ಎಂದರೆ ಸರಿ. ದಾಖಲೆಯ ಮೇಲೆ ಇರುವ ಬರವಣಿಗೆಯೂ ನನ್ನ ಸಮಕ್ಷಮದಲ್ಲಿ ಬರೆದಂತಹ ಬರವಣಿಗೆ ಆಗಿರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ಬರೆದಿರುವ ವಿಷಯ ನಿಮಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ದಿಃ22-01-2024 ರಂದು ನೀವು ಸಾಕ್ಷಿ ನುಡಿಯಲು ಬಂದಾಗ ನಿಮ್ಮ ಜೊತೆಗೆ

ಚಾಸಾ-6 ರವರು ಬಂದಿದ್ದರು ಎಂದರೆ ಸರಿ. ನೀವು ನ್ಯಾಯಾಲಯದ ಮುಂದೆ ಚಾಸಾ-6 ರವರ ಒತ್ತಡದ ಮೇರೆಗೆ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿ. ಆರೋಪಿಯು ನಿಮ್ಮ ಅಧಿಕಾರದ ಅವಧಿಯಲ್ಲಿ ಯಾವುದೇ ತೊಂದರೆ ಕೊಟ್ಟಂತಹ ವ್ಯಕ್ತಿಯಲ್ಲ ಎಂದರೆ ಸರಿ. ಸದರಿ ಘಟನೆಯ ಕುರಿತಾಗಿ ಪೊಲೀಸರಿ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿ. ನೀವು ಕೊಟ್ಟ ಹೇಳಿಕೆಯ ಎಲ್ಲ ಅಂಶಗಳು ನಿಮ್ಮ ಮೇಲಾಧಿಕಾರಿಗಳ ಒತ್ತಡದಿಂದ ಕೊಟ್ಟಿರುತ್ತೀರಿ ಎಂದರೆ ಸರಿ. ಆರೋಪಿಯು ನಿಮ್ಮ ಕರ್ತವ್ಯದ ಅವಧಿಯಲ್ಲಿ ಯಾವುದೇ ರೀತಿಯ ಕರ್ತವ್ಯಕ್ಕೆ ಅಡ್ಡಿಯನ್ನು ಉಂಟುಮಾಡುವಂತಹ ಕೆಲಸ ಮಾಡಿರುವುದಿಲ್ಲ ಎಂದರೆ ಸರಿ. ದಿಃ12-08-2018 ರಂದು ಆರೋಪಿಯು ನಿಮ್ಮ ಕರ್ತವ್ಯಕ್ಕೆ ಯಾವುದೇ ಅಡ್ಡಿ ಉಂಟು ಮಾಡಿದ್ದು ಇರುವುದಿಲ್ಲ ಎಂದರೆ ಸರಿ. ನಿಮ್ಮ ಸಮಕ್ಷಮದಲ್ಲಿ ಚಾಸಾ-1 ರವರಾಗಲಿ ಅಥವಾ ಚಾಸಾ-6 ರವರಾಗಲಿ ತಮ್ಮ ಕರ್ತವ್ಯಕ್ಕೆ ಆರೋಪಿಯ ಅಡ್ಡಿ ಮಾಡಿರುತ್ತಾರೆ ಎಂದು ಹೇಳಿಕೊಂಡಿದ್ದು ಇರುವುದಿಲ್ಲ ಎಂದರೆ ಸರಿ. ಆರೋಪಿಯು ತಮ್ಮ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶಿವಕುಮಾರ ನಾಯಕ ಇವರ ಊರಿನವರು ಎಂದರೆ ಸರಿ. ಶಿವಕುಮಾರ ನಾಯಕ ಇವರ ವಿರುದ್ಧವೂ ಸಹ ಪ್ರಕರಣವನ್ನು ದಾಖಲು ಮಾಡಿದ್ದರು ಎಂದರೆ ಸಾಕ್ಷಿಯು ಪ್ರಕರಣವನ್ನು ದಾಖಲಿಸಿದ್ದರು, ಆದರೆ ನನಗೂ ಹಾಗೂ ಆ ಪ್ರಕರಣಕ್ಕೂ ಯಾವುದೇ ರೀತಿ ಸಂಬಂಧವಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಪ್ರಕರಣದಲ್ಲಿ ಚಾಸಾ-1 ರವರಿಗೆ ಪೂರಕವಾಗುವ ಹಾಗೆ ಆರೋಪಿಯು ನಡೆದುಕೊಂಡಿರಲಿಲ್ಲ ಎಂದರೆ ಸರಿ. ಆರೋಪಿಯ

ಶಿವಕುಮಾರ ಇವರ ಪರವಾಗಿ ನಿಂತುಕೊಂಡಿದ್ದರು ಎಂದರೆ ಸಾಕ್ಷಿಯು ಅವರ ಊರಿನವರೇ ಆಗಿರುವುದರಿಂದ ಅವರ ಪರವಾಗಿ ನಿಂತುಕೊಂಡಿದ್ದರು ಎಂದು ನುಡಿಯುತ್ತಾರೆ. ಈ ರೀತಿ ಶಿವಕುಮಾರ ಇವರ ಪರವಾಗಿ ನಿಂತುಕೊಂಡಿದ್ದರಿಂದ ಹಾಗೂ ನಿಮ್ಮ ಇಲಾಖೆಯ ಡಿಸೇಲ್ ವ್ಯವಹಾರದ ಹಾಗೂ ಬಿಡಿಭಾಗಗಳ ಮಾರಾಟದ ಕುರಿತಾಗಿ ಯುನಿಯನ್ ಲೀಡರ್ ಇವರಿಗೆ ತಿಳಿಸುತ್ತಿದ್ದರಿಂದ ಚಾಸಾ-1 ಮತ್ತು ಇಲಾಖೆಯವರು ಆರೋಪಿಯ ಮೇಲೆ ಒಂದು ಕಣ್ಣು ಇಟ್ಟಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿಯ ಮೇಲೆ ನಿಮ್ಮ ಮೇಲಾಧಿಕಾರಿಗಳು ಈ ಒಂದು ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಿಃ30-07-2018 ರಂದಾಗಲಿ ಅಥವಾ ದಿಃ31-07-2018 ರಂದಾಗಲಿ ನಿಮ್ಮ ಸಮಕ್ಷಮ ಯಾವುದೇ ಘಟನೆಯಾಗಿರುವುದಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಆರೋಪಿಯು ಯಾರ ಹತ್ತಿರವೂ ಅನುಚಿತವಾಗಿ ನಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಿಮ್ಮ ಮೇಲಾಧಿಕಾರಿಗಳು ಉದ್ದೇಶಪೂರಕವಾಗಿ ಸೃಷ್ಟಿ ಮಾಡಿಕೊಂಡ ಪ್ರಕರಣಕ್ಕೆ ಅವರ ಒತ್ತಡದ ಮೇರೆಗೆ ಪ್ರಕರಣಕ್ಕೆ ಪೂರಕವಾಗುಂತೆ ಸಾಕ್ಷಿ ಹೇಳಿರುತ್ತೀರಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಲೇಬೇಕಾಗುತ್ತದೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಮ್ಮ ಹೇಳಿಕೆಯಲ್ಲಿ ಹಾಗೂ

ನ್ಯಾಯಾಲಯದ ಮುಂದೆ ಕೊಟ್ಟಿರುವ ಹೇಳಿಕೆಯಲ್ಲಿ ಬರೆದಂತಹ ಯಾವುದೇ ಅಂಶಗಳು ಸತ್ಯವಾಗಿರುವುದಿಲ್ಲ ಎಂದು ಆರೋಪಿಯು ಹೇಳುತ್ತಾರೆ ಎಂದರೆ ಸರಿ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.